# ಮನುವಿಗೊಂದು ಮಂದಿರ

**ಮನು ಆಲಯವನ್ನು ಮರ ಹಾಗೂ ಕಲ್ಲಿನಿಂದ ಕಟ್ಟಲಾಗಿದೆ. ಮನು ಉಪಯೋಗಿಸುತ್ತಿದ್ದ ಎನ್ನಲಾದ ವಸ್ತುಗಳು ವಿವಿಧ ಆಕಾರಗಳಲ್ಲಿದ್ದು, ಅವುಗಳನ್ನು ಗರ್ಭಗುಡಿಯಲ್ಲಿ ಇರಿಸಲಾಗಿದೆ.**

**★ ಎಸ್. ಪ್ರಭಾವತಿ**

ಮನುಸ್ಮೃತಿ ಬರೆದ ಋಷಿ ಮನುವಿಗೂ ಮನಾಲಿಯಲ್ಲಿ ಒಂದು ದೇವಾಲಯವಿದೆ. ಬಹುಶಃ ಮನುವಿಗಾಗಿ ಕಟ್ಟಿಸಿರುವ ದೇವಾಲಯ ಇದೊಂದೇ. ಭಾರತೀಯರಲ್ಲದೆ, ವಿದೇಶೀರೂ ಹೆಚ್ಚಿನ ಸಂಖ್ಯೆಯಲ್ಲಿ ಆಸಕ್ತಿಯಿಂದ ಭೇಟಿ ಕೊಡುವ ಈ ದೇವಾಲಯ 'ಓಲ್ಡ್ ಮನಾಲಿ'ಯ ಪ್ರಮುಖ ಆಕರ್ಷಣೆ. ಮುಖ್ಯ ರಸ್ತೆಯ ಸಮೀಪದ ಪ್ರತಿಷ್ಠಿತ ಕ್ಲಬ್ ಹೌಸ್‌ನಿಂದ ಸುಮಾರು 3 ಕಿ.ಮೀ. ದೂರದಲ್ಲಿ, ಹಸಿರ ಕಾಡಿನ ನಡುವೆ ಬಿಯಾಸ್ ನದಿಯ ದಡದಲ್ಲಿರುವ ಈ ಆಲಯಕ್ಕೆ ನೂರಾರು ವರ್ಷಗಳ ಇತಿಹಾಸವಿದೆ.

ಆಕಾಶವನ್ನು ಮುತ್ತಿಕ್ಕಲು ಬಾಗುತ್ತಿರುವಂತೆ ಮೋಡಗಳ ದಟ್ಟಣೆ, ಮುಸುಕಿದ ಮಂಜಿನ ಮಧ್ಯೆ ತಣ್ಣನೆಯ ಗಾಳಿ ಕದಪುಗಳಿಗೆ ಮುದ್ದಿಸುತ್ತಿದ್ದರೆ, ಆ ಅಂಕುಡೊಂಕಾದ ಹಾದಿಯಲ್ಲಿ ವರ್ಣಿಸಲಾಗದ ಸೌಂದರ್ಯವಿತ್ತು. ಇಕ್ಕಟ್ಟಾದ ತಿರುವುಳ್ಳ ಈ ಹಾದಿ, ಪರ್ವತ ಕಣಿವೆಗಳಿಗೆ ಹೆಬ್ಬಾಗಿಲಿನಂತೆ ಕಾಣಿಸುತ್ತದೆ. ಮೋಹಕ ಬೆಟ್ಟದ ಅದ್ಭುತ ದೃಶ್ಯ. ದೇವಾಲಯದ ಮುಂದೆ ನಿಂತು ನೋಡಿದರೆ ದೂರದಲ್ಲಿ ಎತ್ತರದಲ್ಲಿ ಜಲಪಾತವೊಂದು ಕಾಣುತ್ತದೆ. ಆದರೆ ಅದನ್ನು ತಲುಪಲು ಸರಿಯಾದ ಮಾರ್ಗವಿದ್ದಂತಿಲ್ಲ. ಹಿಮಾಲಯದ ಮಡಿಲಿನ ನೈಸರ್ಗಿಕ ಸ್ವರ್ಗದಂತಿರುವ ಮನಾಲಿಯಲ್ಲಿನ ಮನು ದೇವಾಲಯ ಪೈನ್ ಮರಗಳಿಂದ ಆವೃತ. ಸುತ್ತಲೂ ಹಳೆ ಮನೆಗಳ ಶುದ್ಧ ಹಳ್ಳಿ. ಇಕ್ಕಟ್ಟಾದ ಓಣಿಯಲ್ಲಿ ನಡೆದಾಡುವಾಗ ಪಾಚಿಯಿಂದ ಕೂಡಿ ಜಾರುವ ಸಂಭವವೂ ಇದೆ.

ಮನು ಆಲಯವನ್ನು ಕೇವಲ ಮರ ಹಾಗೂ ಕಲ್ಲಿನಿಂದ ಕಟ್ಟಲಾಗಿದೆ. ಬಳಸಿದ್ದು ದೇವದಾರು ಮರ. ಆಲಯದ ಒಳಗೆ ಮತ್ತು ಹೊರಗೆ ಕಂಬಗಳ ಮೇಲೆ ಐತಿಹಾಸಿಕ ಮತ್ತು ಆಧ್ಯಾತ್ಮಿಕ ವಿಚಾರಗಳನ್ನು ಕೆತ್ತಲಾಗಿದೆ. ದೇವಾಲಯದ ಒಳಾಂಗಣ ವಿಶಾಲವಾಗಿದ್ದು ನೆಲಕ್ಕೆ ಅಮೃತಶಿಲೆಯ ಹಾಸು. ಮನು ಉಪಯೋಗಿಸುತ್ತಿದ್ದ ಎನ್ನಲಾದ ವಸ್ತುಗಳು ವಿವಿಧ ಆಕಾರಗಳಲ್ಲಿದ್ದು ಅವುಗಳನ್ನು ಗರ್ಭಗುಡಿಯಲ್ಲಿ



